**ಓ.ಎಸ್. ನಂ. 120/2023** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 18.9.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

ಪಾಟೀ ಸವಾಲುಃ 4 ರಿಂದ 9 ನೇ ಪ್ರತಿವಾದಿ ಪರ ವಕೀಲರು ಗೈರುಹಾಜರಾಗಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲುಃ 10 ಮತ್ತು 11 ನೇ ಪ್ರತಿವಾದಿ ಪರ ಶ್ರೀ ಬಿ.ಎಸ್.ಎಸ್ ವಕೀಲರಿಂದಃ**

ವಾದಿಯರು ನಾಗಶೆಟ್ಟಿ ರವರ ಮಕ್ಕಳು ಎಂದು ತೋರಿಸುವ ಬಗ್ಗೆ ಯಾವ ದಾಖಲೆಯನ್ನು ಹಾಜರುಪಡಿಸಿರುತ್ತೀರಿ ಎಂದರೆ ಹಾಜರುಪಡಿಸಿರುತ್ತೇನೆ ಎನ್ನುವರು. ನಾಗಶೆಟ್ಟಿರವರು ಹಂಪಾಪುರದಲ್ಲಿ ಜನಿಸಿ ಬೆಳೆದಿರುತ್ತಾರೆ. ನಾಗಶೆಟ್ಟಿ ರವರಿಗೆ ಹಂಪಾಪುರದಲ್ಲಿ ಯಾವುದೇ ವಾಸದ ಮನೆ ಇರಲಿಲ್ಲ. ನಾಗಶೆಟ್ಟಿರವರ ಹೆಸರಿಗೆ ಇದ್ದ ಮನೆಯನ್ನು ಅವರು ತೀರಿಕೊಂಡ ನಂತರ ಅವರ ಹೆಂಡತಿ ಭಾಗ್ಯಮ್ಮ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿದಾರರು ಸದರಿ ಮನೆಯನ್ನು ನನ್ನ ತಾಯಿ ಭಾಗ್ಯಮ್ಮ ರವರಿಗೆ ಅರಿಶಿಣ ಕುಂಕುಮಕ್ಕೆ ಅವರ ಸೋದರತ್ತೆ ನೀಡಿರುತ್ತಾರೆ ಎನ್ನುವರು. ನಾಗಶೆಟ್ಟಿ ರವರಿಗೆ ಮನೆ ಇದ್ದು ಸದರಿ ಮನೆಗೆ ಸಂಬಂಧಪಟ್ಟ ಮನೆಯ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿದಾರರು ನನ್ನ ತಂದೆಗೆ ಸಂಬಂಧಪಟ್ಟ ಆಸ್ತಿಗೆ ದಾವೆಯನ್ನು ಹಾಕಿದ್ದು, ನನ್ನ ತಾಯಿಗೆ ಸಂಬಂಧಪಟ್ಟ ಮನೆಗೆ ಸಂಬಂಧಿಸಿದಂತೆ ಈ ದಾವೆಯನ್ನು ಹಾಕಿರುವುದಿಲ್ಲ ಎನ್ನುವರು. 10 ಮತ್ತು 11 ನೇ ಪ್ರತಿವಾದಿಯರು ಈ ದಾವೆಗೆ ಹಾಕಿರುವ ತಕರಾರಿನ ಬಗ್ಗೆ ತಿಳಿದುಕೊಂಡಿರುವುದಿಲ್ಲ. ವಾದಿಯರಿಗೂ ನಾಗಶೆಟ್ಟಿ ಹಾಗೂ ಭಾಗ್ಯಮ್ಮ ರವರಿಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾಗಶೆಟ್ಟಿ ರವರಿಗೆ ದಾವಆಸ್ತಿಯು ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿದಾರರು ನನ್ನ ತಂದೆಯು ಯಾರಿಂದಲೋ ಯಾವಾಗಲೋ ಖರೀದಿ ಮಾಡಿರುತ್ತಾರೆ ಎನ್ನುವರು. ನಾಗಶೆಟ್ಟಿ ರವರು 1992-93 ರಲ್ಲಿ ತೀರಿಕೊಂಡಿರುತ್ತಾರೆ. ಅವರ ಮರಣ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾಗಶೆಟ್ಟಿ ರವರು ತೀರಿಕೊಂಡ ನಂತರ ದಾವಆಸ್ತಿಯ ಖಾತೆ ಯಾರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿದಾರರು ನನ್ನ ತಾಯಿಯ ಹೆಸರಿಗೆ ಖಾತೆಯಾಗಿತ್ತೋ ಇಲ್ಲವೊ ಎಂದು ನನಗೆ ಗೊತ್ತಿರುವುದಿಲ್ಲ ಎನ್ನುವರು. ದಾವಆಸ್ತಿಯು ಒಟ್ಟು ಕುಟುಂಬದ ಆಸ್ತಿ ಎಂದು ತೋರಿಸಲು ಯಾವ ದಾಖಲೆಯನ್ನು ಹಾಜರುಪಡಿಸಿರುತ್ತೀರಿ ಎಂದರೆ ಸಾಕ್ಷಿದಾರರು ದಾಖಲೆಯನ್ನು ಹಾಜರುಪಡಿಸಿರುತ್ತೇನೆ ಎನ್ನುವರು. ವಾದಿಯರು, 1 ರಿಂದ 3 ನೇ ಪ್ರತಿವಾದಿಯರು ಒಟ್ಟು ಕುಟುಂಬದ ಸದಸ್ಯರು ಮತ್ತು ದಾವಆಸ್ತಿಯು ಒಟ್ಟು ಕುಟುಂಬದ ಆಸ್ತಿ ಎಂಬುದು ಸುಳ್ಳು, ನಮಗೂ ಪ್ರತಿವಾದಿಯರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರು ಮತ್ತು 1 ರಿಂದ 3 ನೇ ಪ್ರತಿವಾದಿಯರು ಜಂಟಿ ಸ್ವಾಧೀನದಲ್ಲಿರುವ ಬಗ್ಗೆ ಯಾವ ದಾಖಲೆಯನ್ನು ಹಾಜರುಪಡಿಸಿರುತ್ತೀರಿ ಎಂದರೆ ಸಾಕ್ಷಿದಾರರು ಆಸ್ತಿಯ ದಾಖಲೆಯನ್ನು ಹಾಜರುಪಡಿಸಿರುತ್ತೇನೆ ಎನ್ನುವರು. ವಾದಿಯರು ಎಂದಿಗೂ ದಾವಆಸ್ತಿಯ ಜಂಟಿ ಸ್ವಾಧೀನದಲ್ಲಿರಲಿಲ್ಲ, ಆ

ಕಾರಣ ಅದನ್ನು ತೋರಿಸಲು ಯಾವ ದಾಖಲೆಯು ನಮ್ಮ ಬಳಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಆಸ್ತಿಯು 1 ನೇ ಪ್ರತಿವಾದಿ ಹೆಸರಿಗೆ ಎಂ.ಆರ್ ನಂಬರ್ 37/2005-06 ರಂತೆ ಖಾತೆಯಾಗಿದ್ದು, ಆ ಪ್ರಕಾರ ಅವರು ಸ್ವಾಧೀನದಲ್ಲಿದ್ದರು ಎಂದರೆ ಸಾಕ್ಷಿದಾರರು ಖಾತೆಯ ಬಗ್ಗೆ ನನಗೆ ಗೊತ್ತಿರುವುದಿಲ್ಲ, ಆದರೆ 2005-06 ರಲ್ಲಿ ಮಾರಾಟ ಮಾಡಿರುತ್ತಾರೆ ಎನ್ನುವರು. 1 ನೇ ಪ್ರತಿವಾದಿಯು ಅವರ ಹೆಸರಿಗೆ ಖಾತೆಯಾದ ನಂತರ ದಿನಾಂಕ 16.2.2006 ರಂದು ಸದರಿ ಆಸ್ತಿಯನ್ನು 4 ನೇ ಪ್ರತಿವಾದಿಯ ಗಂಡ ನಜೀರ್ ಅಹ್ಮದ್ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ಮಾರಾಟ ಮಾಡಿರುವ ವಿಚಾರ ಗೊತ್ತಿರುವುದಿಲ್ಲ ಎನ್ನುವರು. ಸದರಿ ನಜೀರ್ ಅಹ್ಮದ್ ಬದುಕಿರುವವರೆಗೂ ಅವರು ಸದರಿ ಆಸ್ತಿಯ ಸ್ವಾಧೀನದಲ್ಲಿದ್ದರು ಎಂದರೆ ಸಾಕ್ಷಿದಾರರು ಖರೀದಿ ಮಾಡಿದವರು ಸ್ವಾಧೀನದಲ್ಲಿರಬಹುದು, ಮೂರು ಕೈ ಬದಲಾವಣೆಯಾಗಿರುತ್ತದೆ ಎನ್ನುವರು. ಸದರಿ ನಜೀರ್ ಅಹ್ಮದ್ ತೀರಿಕೊಂಡ ನಂತರ 4 ರಿಂದ 9 ನೇ ಪ್ರತಿವಾದಿಯರ ಹೆಸರಿಗೆ ಎಂ.ಆರ್ ನಂಬರ್ ಹೆಚ್ 31/2021-22 ರಂತೆ ಖಾತೆಯಾಗಿದ್ದು ಅವರು ದಾವಆಸ್ತಿಯ ಸ್ವಾಧೀನದಲ್ಲಿದ್ದರು ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎನ್ನುವರು. 4 ರಿಂದ 9 ನೇ ಪ್ರತಿವಾದಿಯರು ದಿನಾಂಕ 29.10.2022 ರಂದು ದಾವಆಸ್ತಿಯನ್ನು 10 ಮತ್ತು 11 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿ ಅದೇ ದಿನ ಸ್ವಾಧೀನವನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಆಸ್ತಿಯಲ್ಲಿ 10 ಮತ್ತು 11 ನೇ ಪ್ರತಿವಾದಿಯರು ಈಗ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸಾಕ್ಷಿದಾರರು ಮಾಡುತ್ತಿರಬಹುದು ನನಗೆ ಗೊತ್ತಿರುವುದಿಲ್ಲ ಎನ್ನುವರು.

1 ರಿಂದ 3 ನೇ ಪ್ರತಿವಾದಿಯರು ಈಗ ಹಂಪಾಪುರದಲ್ಲಿರುವ ನಾಗಶೆಟ್ಟಿ ರವರಿಗೆ ಸಂಬಂಧಪಟ್ಟ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸಾಕ್ಷಿದಾರರು ನನ್ನ ತಾಯಿಯ ಹೆಸರಿನಲ್ಲಿ ಮನೆ ಇರುತ್ತದೆ ಎನ್ನುವರು. ಸದರಿ ಮನೆಯನ್ನು 1 ನೇ ಪ್ರತಿವಾದಿಗೆ ಸೇರಿರುವುದಿಲ್ಲ, ನಾಗಶೆಟ್ಟಿ ರವರಿಗೆ ಸೇರಿರುತ್ತದೆ, ನಾನು ಉದ್ದೇಶಪೂರ್ವಕವಾಗಿ ಈ ಆಸ್ತಿಯನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. 10 ಮತ್ತು 11 ನೇ ಪ್ರತಿವಾದಿಯರು ಅವರು ಖರೀದಿ ಮಾಡಿದ ದಿನದಿಂದ ದಾವಆಸ್ತಿಯ ಸ್ವಾಧೀನದಲ್ಲಿದ್ದು ವ್ಯವಸಾಯ ಮಾಡಿಕೊಂಡು ದಾವಆಸ್ತಿಯ ಮಾಲೀಕರಾಗಿರುತ್ತಾರೆ ಎಂದರೆ ಸರಿಯಲ್ಲ. 2006 ರಿಂದ ಈ ದಾವೆ ಹಾಕುವವರೆಗೆ 17 ವರ್ಷವಾಗಿದ್ದು, ವಾದಿಯರು ನಾಗಶೆಟ್ಟಿ ರವರ ನಿಜವಾದ ಮಕ್ಕಳಾಗಿದ್ದಲ್ಲಿ ಈ ದಾವೆಯನ್ನು ಮೊದಲೇ ಹಾಕುತ್ತಿದ್ದರು, ಅವರ ಮಕ್ಕಳಲ್ಲದ ಕಾರಣ ದಾವೆಯನ್ನು ಹಾಕಿರಲಿಲ್ಲ ಎಂದರೆ ಸಾಕ್ಷಿದಾರರು ದಾವಆಸ್ತಿಯಲ್ಲಿ 1 ರಿಂದ 3 ನೇ ಪ್ರತಿವಾದಿಯರು ಬೆಳೆ ಬೆಳೆಯುತ್ತಿದ್ದು ಬೆಳೆದುಕೊಳ್ಳಲಿ ಎಂದು ಸುಮ್ಮನಿದ್ದೆವು ಎನ್ನುವರು. 10 ಮತ್ತು 11 ನೇ ಪ್ರತಿವಾದಿಯರು ದಾವಆಸ್ತಿಯ ಸದ್ಭಾವನೆ ಖರೀದಿದಾರರು ಎಂದರೆ ಸರಿಯಲ್ಲ. ಅವರು ದಾವಆಸ್ತಿಗೆ ಸರಿಯಾದ ಮಾರುಕಟ್ಟೆ ಮೌಲ್ಯವನ್ನು ನೀಡಿ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ಅವರು ಏನು ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಎನ್ನುವರು. ದಾವಪತ್ರದ 7 ನೇ ಖಂಡಿಕೆಯಲ್ಲಿ ಹೇಳಿರುವ ವಿಚಾರಗಳು ಸುಳ್ಳಿನಿಂದ ಕೂಡಿದ್ದು, 8 ಮತ್ತು 9 ನೇ ಖಂಡಿಕೆಯ ವಿಚಾರವು 10 ಮತ್ತು 11 ನೇ ಪ್ರತಿವಾದಿಯರ ಗಮನದಲ್ಲಿರಲಿಲ್ಲ ಎಂದರೆ ಸರಿಯಲ್ಲ.

10 ಮತ್ತು 11 ನೇ ಪ್ರತಿವಾದಿಯರ ವಿರುದ್ಧ ಈ ದಾವೆ ಹಾಕಲು ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.